ವಿಷಯ: ನಬಾರ್ಡ್ ಯೋಜನೆಯಲ್ಲಿ ಬೀದರ್ ಜಿಲ್ಲೆಯಲ್ಲಿ ಸಣ್ಣನೀರಾವರಿ ಯೋಜನೆಗಳು.

2803 (3367)

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಬಾರ್ಡ್ ಯೋಜನೆಯಲ್ಲಿ ಬೀದರ್ ಜಿಲ್ಲೆಯಲ್ಲಿ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಸಣ್ಣ ನೀರಾವರಿ ಯೋಜನೆಗಳಾವುವು: (ತಾಲ್ಲೂಕುವಾರು ವಿವರ ನೀಡುವುದು)

ಆ) ಬಸವಕಲ್ಯಾಣದಲ್ಲಿ ಮನ್ನ ಹಳ್ಳಿ ಗ್ರಾಮ ಸೈದಾಪುರ ಗ್ರಾಮ, ವಡ್ಡರಗ್ರಾಮ ಹಾಗೂ ಪಡಂರಗೆರಾ ಗ್ರಾಮಗಳಿಗೆ ನಬಾರ್ಡ್ ಯೋಜನೆಯಡಿಯಲ್ಲಿ ಸಣ್ಣ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತಾವನೆ ಕಳುಹಿಸಲಾಗಿದ್ದು, ಇವುಗಳ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಇ) ಈ ಮೇಲ್ಕಂಡ ಯೋಜನೆಗಳ ಅಂದಾಜು ವೆಚ್ಚವೆಷ್ಟು?

ಈ) ಈ ಯೋಜನೆಗಳಿಂದ ಎಷ್ಟು ಎಕರೆ ಭೂಮಿಗೆ ನೀರಾವರಿಯಾಗಿರುತ್ತದೆ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) ಬೀದರ್ ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ಸಣ್ಣ ನೀರಾವರಿಯ ಏಳು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಹಾಗೂ ಹತ್ತು ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದೆ. (ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಆ, ಇ ಮತ್ತು ಈ) ಈ ಕಾಮಗಾರಿಗಳ ತನಿಖೆ ಕೈಗೊಳ್ಳಬೇಕಾಗಿರುವುದರಿಂದ ಪ್ರಸ್ತಾವನೆ ಸಲ್ಲಿಸಿಲ್ಲ. ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಿದ ನಂತರ ಅಂದಾಜು ವೆಚ್ಚ ನೀರಾವರಿಯಾಗುವ ಅಚ್ಚುಕಟ್ಟು ಪ್ರದೇಶ ತಿಳಿಯುವುದು.

ವಿಧಾನ ಸಭಾ ಪ್ರಶ್ನೆ ಸಂಖ್ಯೆ: 3367ಕ್ಕೆ ಅನುಬಂಧ (ತಾಲ್ಲೂಕುವಾರು ವಿವರಗಳ ನಬಾರ್ಡ್ ಯೋಜನೆಯಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳು)

ಕ್ರಮ ಸಂಖ್ಯೆ	ತಾಲ್ಲೂಕು	ಅಚ್ಚುಕಟ್ಟು ಹೆಕ್ಟೇರ್‌ಗಳಲ್ಲಿ	ಅಂದಾಜು ಮೊತ್ತ	7:97ರವರೆಗೆ ಆದ ವೆಚ್ಚ	ನಬಾರ್ಡ್‌ದ ಸಹಾಯಧನ	ಷರಾ
1	2	3	4	5	6	7
1)	ಗಣೇಶಪಲಾರಕೆರೆ ತಾ: ಔರಾದ್	300	225.38	20.00	20.00	ಕೆಲಸ ಮುಗಿದಿರುತ್ತದೆ.
2)	ಕಾರಂಜಾ ನದಿಗೆ ಅಡ್ಡಲಾಗಿ ಅನಂತ ವಾಡಿ ಹತ್ತಿರ ಬ್ಯಾರೇಜ್ ಕಂ ಬ್ರಿಡ್ಜ್ ತಾ:ಬಾಲ್ಕಿ	300	80.62	22.76	34.25	ಕೆಲಸ ಪ್ರಗತಿಯಲ್ಲಿರುತ್ತದೆ.
3)	ಸಿರಾಗಪೂರ ಕೆರೆ ತಾ:ಬಸವಕಲ್ಯಾಣ	100	31.66	27.26	6.00	-ಸದರ-
4)	ಹೊನ್ನಳ್ಳಿ ಕೆರೆ ತಾ:ಬಸವಕಲ್ಯಾಣ	100	49.15	77.96	24.58	-ಸದರ-
5)	ಮಿರಕಲ್ ಕೆರೆ ತಾ:ಬಸವಕಲ್ಯಾಣ	79	42.79	20.09	18.71	-ಸದರ-
6)	ಕಂಗನಕೋಟೆ ಕೆರೆ ತಾ:ಬೀದರ್	112	57.18	58.31	28.78	ಕೆಲಸ ಮುಗಿಯುವ ಹಂತದಲ್ಲಿದೆ.
7)	ಹೂಕ್ರಾಣ (ಬಿ) ಕೆರೆ ತಾ:ಬೀದರ್	70	41.94	29.59	19.79	ಕೆಲಸ ಪ್ರಗತಿಯಲ್ಲಿದೆ.

ನಬಾರ್ಡ್ ಯೋಜನೆಯಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಿದ ಪ್ರಸ್ತಾವನೆ ಸಲ್ಲಿಸಿದ ಕಾಮಗಾರಿಗಳು

1) ಮಂಜ್ರಾನದಿಗೆ ಅಡ್ಡಲಾಗಿ ಕೊಂಗಳಿ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ ತಾ: ಬಾಲ್ಕಿ.

2) ಮಂಜ್ರಾನದಿಗೆ ಅಡ್ಡಲಾಗಿ ಲಖನಗಾಂವ್ ಹತ್ತಿರ ಬ್ರಿಡ್ಜ ಕಂ ಬ್ಯಾರೇಜ್ ತಾ:ನಾಲ್ಕಿ.

3) ಮಂಜ್ರಾನದಿಗೆ ಅಡ್ಡಲಾಗಿ ಹಲಸಿ ತುಗಾಂವ್ ಹತ್ತಿರ ಬ್ರಿಜ್ ಕಂ ಬ್ಯಾರೇಜ್ ತಾ: ಬಾಲ್ಕಿ

4) ಕೌಡಂಗಾಂವ ಹೊಸ ಕೆರೆ ತಾ: ಔರಾದ್.

5) ಚಿಮಕೋಡ ಕೆರೆ ಸುಧಾರಣೆ ತಾ:ಬೀದರ್.

6) ಚಿಕ್ಕನಾಗಾಂವ ಕೆರೆ ಸುಧಾರಣೆ ತಾ:ಬಸವಕಲ್ಯಾಣ.

7) ಕಲಕೋರ ಕೆರೆ ಸುಧಾರಣೆ ತಾ:ಬಸವಕಲ್ಯಾಣ.

8) ನಾಗನಪಲ್ಲಿ ಹೊಸ ಕೆರೆ (ಉಳಿದ ಕೆಲಸ) ತಾ:ಔರಾದ್

9) ಕಳಸಿದಾಳ ಹೊಸ ಕೆರೆ (ಉಳಿದ ಕೆಲಸ) ತಾ:ಭಾಲ್ಕಿ

10) ಘಾತಿವಪುರ ಹೊಸ ಕೆರೆ (ಉಳಿದ ಕೆಲಸ) ತಾ: ಹುಮ್ನಾಬಾದ್.